# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 468 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಾವೇರಿ ಕೊಳ್ಳದ ಅಚ್ಚುಕಟ್ಟು ಪ್ರದೇಶಗಳಲ್ಲಿ ಈಗಾಗಲೇ ಕೈಗೊಂಡಿರುವ ಯೋಜನೆಗಳಲ್ಲಿ ಶೇ.70-80 ರಷ್ಟು ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆ ಉಲ್ಲಂಘನೆ ಪದ್ಧತಿಯಿಂದಾಗಿ ಭತ್ತದ ಬೆಳೆಯನ್ನು ವ್ಯಾಪಕವಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದಾಗಿ ರೈತರಿಗೆ ಆಗುತ್ತಿರುವ ನಷ್ಟ ಹಾಗೂ ಒಣ ಬೇಸಾಯದ ಕೊರತೆ ಮತ್ತು ಒಣ ಪ್ರದೇಶಕ್ಕೆ ನೀರನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಕಾವೇರಿ ಜಲಾನಯನದಲ್ಲಿ ಒಳಪಡುವ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯುವ ಬೆಳೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸ್ಥಳೀಯ ರೈತ ಮುಖಂಡರೊಂದಿಗೆ ಮತ್ತು ಜನಪ್ರತಿನಿಧಿಗಳೊಂದಿಗೆ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ, ಜಲಾಶಯಗಳಿಗೆ ಹರಿದು ಬರುವ ಒಳಹರಿವಿನ ನೀರಿನ ಆಧಾರದ ಮೇಲೆ ನಾಲೆಗಳಲ್ಲಿ ಬೆಳೆಗಳಿಗೆ ಅಗತ್ಯವಿರುವ ನೀರನ್ನು ಹರಿಸಲು ಅಧಿಸೂಚನೆ ಹೊರಡಿಸಲಾಗುತ್ತಿರುತ್ತದೆ. ಕಾವೇರಿ ನ್ಯಾಯಾಧಿಕರಣದಿಂದ ಹಂಚಿಕೆಯಾದ ನೀರನ್ನು ಸಮರ್ಪಕವಾಗಿ ಬಳಸುವ ಹಿನ್ನೆಲೆಯಲ್ಲಿ ಕಾಲುವೆಗಳ ಮೂಲಕ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಿಗೆ ನೀರು ಪೂರೈಸಲಾಗುತ್ತಿದೆ.<br><br>ಅಲ್ಲದೇ ಅಚ್ಚುಕಟ್ಟು ವ್ಯಾಪ್ತಿಯಲ್ಲಿನ ಕೆರೆಗಳು, ಬೆಂಗಳೂರು ಮಹಾನಗರ ಹಾಗೂ ನದಿ-ಪಾತ್ರದಲ್ಲಿ ಬರುವ ಕೆಲವು ನಗರ, ಪಟ್ಟಣ, ಇತರೆ ಗ್ರಾಮಗಳಿಗೂ ಸಹ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ.<br><br>ಹಂಚಿಕೆಯಾದ ನೀರಿನ ಸಮರ್ಪಕ ಬಳಕೆಯ (optimum utilization of the allocated water) ದಿಸೆಯಲ್ಲಿ ಸುಧಾರಣೆಗಾಗಿ ರೈತರಲ್ಲಿ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆಗಳನ್ನು ಬೆಳೆಯಲು ಉತ್ತೇಜಿಸಿ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ. ರೈತರಲ್ಲಿ ನೀರಿನ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಿ, ಪರ್ಯಾಯ ಬೆಳೆಗಳನ್ನು ಬೆಳೆಯಲು ನೀರು ಬಳಕೆದಾರರ ಸಹಕಾರ ಸಂಘದಿಂದ ಸಲಹೆಗಳನ್ನು ನೀಡಲಾಗುತ್ತಿದೆ.<br><br>ಒಣ ಪ್ರದೇಶಕ್ಕೆ ನೀರನ್ನು ಒದಗಿಸಲು ಸರ್ಕಾರವು Dry Land Committee ಯನ್ನು ರಚಿಸಿದ್ದು, ಸಮಿತಿಯು ನೀಡುವ ವರದಿಯನ್ನಾಧರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಾವೇರಿ ಕೊಳ್ಳದ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯಕ್ಕಾಗಿ ಹಾಗೂ ಕುಡಿಯುವ ನೀರಿಗಾಗಿ ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ ಬಳಸಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು; (2000-2001ನೇ ಜಲವರ್ಷದಿಂದ 2025-2026ರ ಜಲವರ್ಷದವರೆಗಿನ ಮಾಹಿತಿಯನ್ನು ಒದಗಿಸುವುದು); | ಕಾವೇರಿ ಜಲ ವಿವಾದ ನ್ಯಾಯಾಧಿಕರಣದ (CWDT) ತೀರ್ಪನ್ನು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ದಿನಾಂಕ:16.02.2018ರ ಆದೇಶದಲ್ಲಿ ಮಾರ್ಪಡಿಸಿದಂತೆ, CWDTಯ ತೀರ್ಪಿನ ಅನುಷ್ಠಾನಕ್ಕಾಗಿ ಅಧಿಸೂಚಿತ ಯೋಜನೆಯ ಪ್ರಕಾರ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕಾವೇರಿ ಜಲ ನಿಯಂತ್ರಣ ಸಮಿತಿ (CWRC)ಗಳನ್ನು ರಚಿಸಲಾಗಿದೆ. ಸದಸ್ಯ ರಾಜ್ಯಗಳೊಂದಿಗೆ 2020-21 ರಿಂದ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದ್ದು, ಸದರಿ ಮಾಹಿತಿಯನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| (ಇ) | ಕಾವೇರಿ ನ್ಯಾಯಾಧೀಕರಣದ ತೀರ್ಪಿನಲ್ಲಿ ನಿಗದಿಪಡಿಸಿರುವ 284.75 ಟಿ.ಎಂ.ಸಿ.ಯಷ್ಟು ಸಂಪೂರ್ಣ ಪ್ರಮಾಣದ ನೀರನ್ನು ಬಳಸಿಕೊಳ್ಳಲಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ನೀರಾವರಿ, ಕುಡಿಯುವ ನೀರು ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ 284.75 ಟಿಎಂಸಿ ಬಳಕೆ ಮಾಡಲು ಅವಕಾಶವಿದ್ದು ಯೋಜನೆಗಳನ್ನು ರೂಪಿಸಲಾಗಿದೆ. ಕೆಲವು ವರ್ಷಗಳಲ್ಲಿ ಮಧ್ಯಮ ಜಲಾಶಯಗಳು ಮತ್ತು ಸಣ್ಣ ನೀರಾವರಿ ಕೆರೆಗಳಲ್ಲಿ ನೀರಿನ ಹರಿವು ವಿನ್ಯಾಸಗೊಳಿಸಿದ ಹರಿವಿಗಿಂತ ಕಡಿಮೆಯಾಗಿರುವ ಕಾರಣ ನೀರಾವರಿ ಬಳಕೆಯಲ್ಲಿ ವ್ಯತ್ಯಾಸವಿರುತ್ತದೆ. |
| (ಈ) | ಈ ನೀರನ್ನು ಸರಿಯಾಗಿ ಬಳಸಿಕೊಳ್ಳಲು ಸರ್ಕಾರ ಯೋಜನೆಗಳನ್ನು ರೂಪಿಸಿದೆಯೇ? | |

ಸಂ: ಜಸಂಇ 80 ಎನ್‌ಎಲ್‌ಎ 2025

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 542 (468) ಕ್ಕೆ **ಅನುಬಂಧ**

## 2020-21ನೇ ಜಲವರ್ಷದಿಂದ 2025-2026ರ ಜಲವರ್ಷದ ವರೆಗಿನ ನೀರಿನ ಬಳಕೆಯ ಮಾಹಿತಿ

| Sl. No | Water allocation as per the CWDT Award as modified by the Hon'ble Supreme Court | | Utilisation (in TMC) | | | | | |
|---|---|---|---|---|---|---|---|---|
| | | | 2020-21 | 2021-22 | 2022-23 | 2023-24 | 2024-25 | 2025-26 (Till November -2025) |
| 1 | 2 | 3 | 4 | 5 | 6 | 7 | 8 | 9 |
| 1 | Irrigation | 233.470 | 227.509 | 210.872 | 181.738 | 104.233 | 207.906 | 177.181 |
| 2 | Reservoir losses | 17.150 | 15.975 | 16.840 | 18.147 | 13.247 | 17.637 | 10.846 |
| 3 | Share in Balance Water | 27.640 | - | - | - | - | - | - |
| 4 | Domestic (Consumptive use) | 6.500 | 6.716 | 7.473 | 7.263 | 7.800 | 7.422 | 4.488 |
| 5 | Industries (Consumptive use) | 0.100 | 0.005 | 0.014 | 0.005 | 0.010 | 0.018 | 0.007 |
| | **Grand Total:** | **284.750** | **250.205** | **235.199** | **207.153** | **125.290** | **232.983** | **192.521** |